# 6

## ಮೂಲ ವಾಕ್ಯ: ಮತ್ತಾಯ 26:17-30

# ಕರ್ತನ ಭೋಜನದಲ್ಲಿರುವ ಪದಾರ್ಥಗಳು

ಕರ್ತನ ಮೇಜಿನಲ್ಲಿ ಯಾವ ವಿಧವಾದ ರೊಟ್ಟಿ ಹಾಗೂ ರಸವನ್ನು ಇಡಬೇಕು ಎಂಬ ಪ್ರಶ್ನೆಯು ಉದ್ಭವಿಸುತ್ತದಲ್ಲವೇ?

### ರೊಟ್ಟಿ

ಕರ್ತನ ಭೋಜನದಲ್ಲಿ ಯೇಸು ಪಸ್ಕದ ರೊಟ್ಟಿಯನ್ನು ಉಪಯೋಗಿಸಿದನು. ಪಸ್ಕ ಹಬ್ಬದಲ್ಲಿಯೂ ಇತರೆ ಸಮಯದಲ್ಲಿಯೂ, ಹುಳಿಯಿಲ್ಲದ ರೊಟ್ಟಿಗಳನ್ನೇ ಬಳಸಬೇಕು ಎಂಬ ನಿಯಮವಿತ್ತು. ವೇದಕ್ಕನುಗುಣವಾದ ಹಾಗೂ ಇತರೆ ಮೂಲಗಳಿಂದ ಈ ರೊಟ್ಟಿಯ ವಿಚಾರವಾಗಿ ನಾವುಗಳು ಕಲಿಯಬಹುದಾಗಿದೆ.

ಪಾಲೆಸ್ತೇನಿನವರು ಗೋಧಿಯಿಂದ ರೊಟ್ಟಿಗಳನ್ನು ತಯಾರಿಸುತ್ತಿದ್ದರು. ಅದು ಹುಳಿಯಿಲ್ಲದ್ದಾಗೆ ಯಾಜಕರಿಂದ ಪ್ರತಿಷ್ಟಿಸಲಾಗಿತ್ತು (ವಿಮೋಚನಕಾಂಡ 29:1, 2). ಇತರೆ ಸಂದರ್ಭಗಳಲ್ಲಿ ಜವೆಗೋದಿಯನ್ನು ಬಳಸುತ್ತಿದ್ದರು (ಅರಣ್ಯಕಾಂಡ 5:15) ಹಾಗೂ ಸಾವೆಯ ಹಿಟ್ಟನ್ನು ಸಹ ಬಳಸುತ್ತಿದ್ದರು (ಯೆಹೆಜ್ಕೇಲ 4:9). ಎರಡು ಕಲ್ಲಿನ ನಡವೆ ಘರ್ಷಣೆಯಿಂದ ಹಾಗೂ ಕಲ್ಲುಗಳನ್ನು ಎತ್ತುಗಳ ಸಹಾಯದಿಂದ ತಿರುಗಿಸಿ ಹಿಟ್ಟನ್ನು ತಯಾರಿಸುತ್ತಿದ್ದರು.

ಇಸ್ರಾಯೇಲ್ಯರು ಐಗುಪ್ತದಿಂದ ನಿರ್ಗಮಿಸುವಾಗ, ಐಗುಪ್ತ್ಯರು (ವಿಮೋಚನಕಾಂಡ 8:3). ಬಳಸುತ್ತಿದ್ದ ಪಾತ್ರೆಗಳನ್ನು ಹಿಟ್ಟನ್ನು ನಾದುವದಕ್ಕಾಗಿ ಬಳಸುತ್ತಿದ್ದರು (ವಿಮೋಚನಕಾಂಡ 12:34). ಪ್ರತಿನಿತ್ಯ ಬಳಕೆಯ ಹಿಟ್ಟನ್ನು ಬಳಸುವ ಮೊದಲು, ಹುಳಿ, ನೀರು ಹಾಗೂ ಹಿಟ್ಟನ್ನು ಪಾತ್ರೆಯಲ್ಲಿ ಕಲಿಸಿಡುತ್ತಿದ್ದರು. ನಾದಿರುವ ಹಿಟ್ಟನ್ನು ಸಣ್ಣ ಭಾಗವಾಗಿ ಮಾಡಿ, ಬೇಯಿಸಿದಾಗ ಅದು ಉಬ್ಬಿಕೊಳ್ಳುತ್ತಿತ್ತು. ಪಸ್ಕ ಹಬ್ಬದ ರೊಟ್ಟಿಯನ್ನು ಈ ವಿಧದಲ್ಲಿ ತಯಾರಿಸಬಾರದಿತ್ತು. ಇಸ್ರಾಯೇಲ್ಯರು ಅತುರವಾಗಿ ಹೊರಡಬೇಕಾದ್ದರಿಂದ, ಹುಳಿಯಿರುವ ರೊಟ್ಟಿಯನ್ನು ತಯಾರಿಸಲು ಅವರಿಗೆ ಸಮಯವಿರಲಿಲ್ಲ. ಈ ಕಾರಣದಿಂದ ಪಸ್ಕ ಹಬ್ಬಕ್ಕಾಗಿ ಹುಳಿ ಇಲ್ಲದ ರೊಟ್ಟಿಗಳನ್ನು ಅವರು ತಯಾರಿಸಬೇಕಿತ್ತು.

ಹಳೇ ಒಡಂಬಡಿಕೆಯ ಕಾಲದಲ್ಲಿ ಮೂರು ವಿಧಗಳ ರೊಟ್ಟಿಗಳನ್ನು ತಯಾರಿಸುತ್ತಿದ್ದರು:

- ಕಲ್ಲುಗಳನ್ನು ಬಿಸಿಮಾಡಿ, ಕಲಸಿದ ಹಿಟ್ಟನ್ನು ಅದರ ಮೇಲೆ ಇಡುತ್ತಿದ್ದರು.
- ಮಣ್ಣಿನ ಅಥವಾ ಕಬ್ಬಿಣದ ತವೆಗಳಲ್ಲಿ ಇಟ್ಟು ಬೆಕಿಯ ಮೇಲೆ ಸುಡುತ್ತಿದ್ದರು.
- ಗುಂಡಿಯಲ್ಲಿ ಬೆಂಕಿಯನ್ನು ಮಾಡಿ, ಡಬ್ಬಗಳಲ್ಲಿ ಹಿಟ್ಟನ್ನು ಹಾಕಿ ಅದರ ಬಳಿಗೆ ಇಟ್ಟು ರೊಟ್ಟಿಗಳನ್ನು ಸುಡುತ್ತಿದ್ದರು.

ಪಸ್ಕದ ರೊಟ್ಟಿಯನ್ನು *"ಮಸಟ್"* ಎನ್ನುತ್ತಿದ್ದರು, ಅದನ್ನು ಹುಳಿಯಿಲ್ಲದೆ ತಯಾರಿಸುತ್ತಿದ್ದರು. ಪಸ್ಕ ಹಬ್ಬದ ರೊಟ್ಟಿಯ ಕುರಿತು ದೇವರು ಮೋಶೆಗೆ ಸಲಹೆ ಸೂಚನೆಗಳನ್ನು ನೀಡಿದನು:

> "ಏಳು ದಿವಸ ನೀವು ಹುಳಿಯಿಲ್ಲದ ರೊಟ್ಟಿಗಳನ್ನು ತಿನ್ನಬೇಕು. ಮೊದಲನೆಯ ದಿನದಲ್ಲಿಯೇ ಹುಳಿಹಿಟ್ಟನ್ನೆಲ್ಲಾ ನಿಮ್ಮ ಮನೆಗಳೊಳಗಿಂದ ತೆಗೆದುಬಿಡಬೇಕು.

ಆ ದಿವಸ ಮೊದಲುಗೊಂಡು ಏಳು ದಿವಸಗಳೊಳಗೆ ಯಾವನಾದರೂ ಹುಳಿಬೆರಸಿದ್ದನ್ನು ತಿಂದರೆ ಅವನು ಇಸ್ರಾಯೇಲ್ಯರಿಂದ ತೆಗೆದು ಹಾಕಲ್ಪಡಬೇಕು" (ವಿಮೋಚನಕಾಂಡ 12:15).

"ಆ ಏಳು ದಿನಗಳೂ ನಿಮ್ಮ ಮನೆಗಳಲ್ಲಿ ಹುಳಿಹಿಟ್ಟೇ ಇರಕೂಡದು" (ವಿಮೋಚನಕಾಂಡ 12:19ಎ).

"ಆ ಏಳು ದಿವಸವೂ ಹುಳಿಯಿಲ್ಲದ ರೊಟ್ಟಿಗಳನ್ನು ತಿನ್ನಬೇಕೇ ದೊರತು ನಿಮ್ಮ ದೇಶದಲ್ಲೆಲ್ಲಾ ಹುಳಿಹಿಟ್ಟಾಗಲಿ ಹುಳಿಯಾಗಲಿ ನಿಮ್ಮ ಬಳಿಯಲ್ಲಿ ಇರಲೇ ಕೂಡದು" (ವಿಮೋಚನಕಾಂಡ 13:7).

"ಆ ಏಳು ದಿವಸವೂ ನಿಮ್ಮ ದೇಶದಲೆಲ್ಲಾ ಹುಳಿಬೆರೆದ ಯಾವ ಪದಾರ್ಥವೂ ನಿಮ್ಮ ಬಳಿಯಲ್ಲಿ ಇರಲೇ ಬಾರದು" (ಧರ್ಮೋಪದೇಶಕಾಂಡ 16:4ಎ).

ಇಸ್ರಾಯೇಲ್ಯರು ಐಗುಪ್ತವನ್ನು ತೊರೆದಾಗ ದೇವರ ಅಪ್ಪಣೆಗಳನ್ನೇ ನೆರವೇರಿಸಿದರು ಆದದರಿಂದ ಆ ಜನರು ತಮ್ಮ ಹಿಟ್ಟಿಗೆ ಹುಳಿ ಹಾಕುವದಕ್ಕಿಂತ ಮೊದಲೇನಾದುವ ಕೊಣವಿಗಳಲ್ಲಿದ್ದ ಕಣಕದ ಮುದ್ದೆಯನ್ನು ಗಂಟುಕಟ್ಟಿ ಹೆಗಲಿನ ಮೇಲೆ ಹಾಕಿಕೊಂಡು ಹೊರಟುಹೋದರು (ವಿಮೋನಕಾಂಡ 12:34). ಅವರು ಕೆಂಪು ಸಮುದ್ರವನ್ನು ದಾಟಿ, ಸುಕ್ಕೋತಿಗೆ ಬಂದಾಗ ಹುಳಿಯಿಲ್ಲದ ರೊಟ್ಟಿಗಳನ್ನು ಸುಟ್ಟರು:

ಅವರು ಐಗುಪ್ತದೇಶದಿಂದ ತಂದ ಕಣಕದ ಮುದ್ದೆಯಿಂದ ಹುಳಿಯಿಲ್ಲದ ರೊಟ್ಟಿಗಳನ್ನು ಮಾಡಿ ಸಟ್ಟರು. ಅವರು ಐಗುಪ್ತ ದೇಶದಿಂದ ಹೊರಡಿಸಲ್ಪಟ್ಟು ಸ್ವಲ್ಪವಾದರೂ ಸಮಯ ಸಿಕ್ಕದೆಹೋದದರಿಂದ ಕಣಕದಲ್ಲಿ ಹುಳಿಯನ್ನು ಕಲಸಿದ್ದಿಲ್ಲ, ಮತ್ತು ಬೇರೆ ಯಾವ ಆಹಾರವನ್ನು ಸಿದ್ಧಪಡಿಸಿಕೊಂಡಿರಲಿಲ್ಲ ... (ವಿಮೋಚನಕಾಂಡ 12:39).

ಹಾಗೂ ದೇವರು ಧಾನ್ಯಸಮರ್ಪಣೆಯ ಕ್ರಮವನ್ನು ಅವರಿಗೆ ತಿಳಿಸಿದನು:

ಯಾವನಾದರೂ ಯೆಹೋವನಿಗೆ ಧಾನ್ಯ ನೈವೇದ್ಯ ಮಾಡಬೇಕೆಂದಿದ್ದರೆ ಅದು ಗೋದಿಹಿಟ್ಟಾಗಿರಬೇಕು (ಯಾಜಕಕಾಂಡ 2:1).

"ಅದು ಎಣ್ಣೆ ಬೆರಸಿದ ಹುಳಿಯಿಲ್ಲದ ಗೋದಿ ಹಿಟ್ಟಿನದಾಗಿರಬೇಕು" (ಯಾಜಕಕಾಂಡ 2:5; ನೋಡಿರಿ ವಚನ 7; ವಿಮೋಚನಕಾಂಡ 29:40). ಅದು ಜೇನು ಮಿಶ್ರಿತವಾಗಿರಬಾರದು (ಯಾಜಕಕಾಂಡ 2:11).

ಯಾಜಕ ಸಮರ್ಪಣೆಯ ರೊಟ್ಟಿಯನ್ನು ಎಣ್ಣೆ ಬೆರಸಿ, ಹುಳಿಯಿಲ್ಲದೆ ತಯಾರಿಸಬೇಕಿತ್ತು (ವಿಮೋಚನಕಾಂಡ 29:1, 2, 23). ಪಸ್ಕದ ರೊಟ್ಟಿಯು ಹುಳಿಯಿಲ್ಲದಿರಬೇಕಿತ್ತು ಎಂದು ಮಾತ್ರ ತಿಳಿಸಲಾಗಿದೆ.

ಕರ್ತನ ಭೋಜನದಲ್ಲಿ ಹುಳಿಯಿರುವ ರೊಟ್ಟಿಯನ್ನು ಬಳಸಬಹುದೇ? "ದ್ರಾಕ್ಷಾರಸಕ್ಕೆ" - ಬದಲಾಗಿ ಇತರೆ ರಸಗಳನ್ನು ಬಳಸಬಹುದೇ, ಯೇಸು - ಬಳಸಿದ ಹುಳಿಯಿಲ್ಲದ ಹಾಗೂ ದ್ರಾಕ್ಷಾರಸವನ್ನು ಬಳಸಬಹುದೇ?

ಯೇಸು ಹುಳಿಯಿಲ್ಲದ ರೊಟ್ಟಿ ಹಾಗೂ ದ್ರಾಕ್ಷಾರಸವನ್ನೇ ಉಪಯೋಗಿಸಿದನು. ಕರ್ತನ ಭೋಜನದಲ್ಲಿ ಇಂಥವುಗಳನ್ನು ಬಳಸುವುದೇ ಉತ್ತಮವಾಗಿದೆ. ಅದು ನಮಗೆ ಸುರಕ್ಷಿಕವೋ ಹೌದಲ್ಲವೇ?

## ದ್ರಾಕ್ಷಾರಸ

ಯೇಸು "ದ್ರಾಕ್ಷಾರಸವನ್ನು" ಬಳಸಿದ ಹಾಗೆ, ನಾವುಗಳು ಅದನ್ನೇ ಬಳಸಬಹುದೇ? ಅದು ಒಪ್ಪಿಗೆಯೇ? ಅದನ್ನು ನೀರಿನಿಂದ ಮಿಶ್ರಣ ಮಾಡಬಹುದೇ? ದ್ರಾಕ್ಷಾರಸದ ಬದಲು ಕೋಲಾವನ್ನು ಬಳಸಬಹುದೇ? ದ್ರಾಕ್ಷೆ ಹಾಗೂ ಸೇಬಿನ ರಸವನ್ನು ಮಿಶ್ರಮಾಡಿ ಬಳಸಬಹುದೇ?

ಪಾಲಿಸ್ತೇನಿನವರು ದ್ರಾಕ್ಷೇಯನ್ನು ಅತೀ ಹೆಚ್ಚಾಗೆ ಬೆಳೆಯುತ್ತಿದ್ದರು, ಅದರಿಂದ ರಸವನ್ನು ತಯಾರಿಸುತ್ತಿದ್ದರು ಆದ್ದರಿಂದ ಅದಕ್ಕೆ ದ್ರಾಕ್ಷೆಯ ರಸ ಎನ್ನುತ್ತಿದ್ದರು.[1] ದ್ರಾಕ್ಷಾರಸವೆಂದರೆ ವೈನ್ ಎಂದು ತಿಳಿಯುವದು ತಪ್ಪಾಗಬಹುದು (ಆಂಪೆಲೋ) ಅಂದರೆ *"ದ್ರಾಕ್ಷಾರಸ"* ಎಂಬ ಅರ್ಥ ಗ್ರೀಕ್‌ನಲ್ಲಿ *"ವೈನ್"* ಎಂದರೆ ದ್ರಾಕ್ಷಾರಸ[2] ಮಾತ್ರವಾಗಿದೆ (ಪ್ರಕಟನೆ 14:18).

ಕುರಿಮರಿಯ ಮಾಂಸದೊಂದಿಗೆ, ಹುಳಿಯಿಲ್ಲದ ರೊಟ್ಟಿಯನ್ನು ಮಾತ್ರ ತಿನ್ನಬೇಕು, ದ್ರಾಕ್ಷಾರಸವನ್ನು ಬಳಸಬೇಕು ಎಂಬ ನಿಯಮವನ್ನು ಹಳೇ ಒಡಂಬಡಿಕೆಯಲ್ಲಿ ನಮೂದಿಸಿರುವದಿಲ್ಲ. ಆದರೆ ಯೇಸುವಿನ ಸಮಯದಲ್ಲಿ, ಸಹಜವಾದ ಊಟದ ಸಂಗಡ ನಾಲ್ಕು ಲೋಟಗಳಷ್ಟು ದ್ರಾಕ್ಷಾರಸವನ್ನು ಬಳಸುವ ವಾಡಿಕೆಯಿತ್ತು.

ಕರ್ತನ ಭೋಜನದಲ್ಲಿ "ಯೇಸು ವೈನ್" ಬಳಸಿದ್ದರೆ (ಮತ್ತಾಯ 26:28, 29). ಅದು *"ಓಯಿನಾಸ್"* ಎಂಬ ಪದ ಬಳಕೆಯನ್ನು ಆತನು ಮಾಡಿರಬಹುದು. ಎಫೆಸ 5:18: "ಮಧ್ಯಪಾನ ಮಾಡಿ ಮತ್ತರಾಗಬೇಡಿರಿ, ಅದರಿಂದ ಪಟಿಂಗತನವು ಹುಟ್ಟುತ್ತದೆ" "ದ್ರಾಕ್ಷಾರಸವೆಂದರೆ" ಮತ್ತು ನೀಡುವ ಅಥವ ನೀಡದೆ ಇರವ ಪಾನ ಎಂಬ ಅರ್ಥವಿಲ್ಲ. ಮನಸ್ಸಾಕ್ಷಿಗಾಗಿಯೂ ಮಧ್ಯಪಾನಕ್ಕೆ ಕೆಲವರು ವಿರೋಧವಾಗಿರುವದರಿಂದಲೂ, ಅದು ಮತ್ತು ನೀಡದ ದ್ರಾಕ್ಷಾರಸವೇ ಎಂದು ಆಯ್ಕೆ ಮಾಡಬಹುದು.

ಪಾನವು ದ್ರಾಕ್ಷಾರಸವಾಗಿದೆ ಇತರೆ ಯಾವುದೇ ರಸವನ್ನು ಕರ್ತನ ಭೋಜನದಲ್ಲಿ ಬಳಸಬಾರದು. ಯೇಸು ಪಾತ್ರೆಯನ್ನು ತೆಗೆದು, ಇದನ್ನು ಮಾಡಿರಿ ಎಂಬುದರ ಅರ್ಥವೇ ನೆಂದರೆ, "ನನ್ನನ್ನು ನೆನಸುವದಕ್ಕೆ ಮಾಡಿರಿ" ಎಂಬದೇ (1 ಕೊರಿಂಥ 11:25; ನೋಡಿರಿ ಮತ್ತಾಯ 26:28, 29). ಯೇಸು ದ್ರಾಕ್ಷಾರಸವನ್ನೇ ತೆಗೆದುಕೊಂಡು ಈ ರೀತಿ ಮಾಡಿರಿ ಎಂದು ಹೇಳಿದ್ದು ಖಚಿತವಾದ ವಿಷಯವಾಗಿದೆ.

ಕರ್ತನ ಭೋಜನಮಾಡುವಾಗ, ಈ ಕೆಳಗಿನ ಅಂಶಗಳನ್ನು ತಡೆಗಟ್ಟಬೇಕು:

- ಯೇಸು ಬಳಸಿದ ದ್ರಾಕ್ಷಾರಸವನ್ನು ಹೊರತುಪಡಿಸಿ, ದ್ರಾಕ್ಷಾಸೋಡ ಅಥವಾ ಇತರೆ ಹಣ್ಣಿನ ರಸವನ್ನು ಬಳಸಲೇಬಾರದು.
- ದ್ರಾಕ್ಷಾರಸದ ಸಂಗಡ ಇತರೆ ರಸಗಳನ್ನು ಮಿಶ್ರ ಮಾಡಬಾರದು.
- ಮೇಜಿನಲ್ಲಿ ಸೇರಿಬರುವವರು ಮಾತ್ರ ರೊಟ್ಟಿ ದ್ರಾಕ್ಷಾರಸವನ್ನು ತೆಗೆದುಕೊಳ್ಳಬೇಕು.

## ಸಾರಾಂಶ

ಕರ್ತನ ಭೋಜನವು ಹುಳಿಯಿಲ್ಲದ ರೊಟ್ಟಿ ಹಾಗೂ ದ್ರಾಕ್ಷಾರಸವನ್ನು ಮಾತ್ರ ಬಳಸಬೇಕು. ಕರ್ತನ ಸಭೆಯಲ್ಲಿ ದೀಕ್ಷಾಸ್ನಾನ ಹೊಂದಿದವರು ಮಾತ್ರ ಇವುಗಳಲ್ಲಿ ಪಾಲುಗಾರರಾಗಬೇಕು, ಯೇಸು ಬಳಸಿದ ವಸ್ತುಗಳನ್ನೇ ಬಳಸುವದು ಸುರಕ್ಷಿತ ಇದರಲ್ಲಿ ಯಾವದೇ ಬದಲಾವಣೆಗಳನ್ನು ತರಬಾರದು.

ಟಿಪ್ಪಣಿಗಳು

[1]David G. Burke, "Fruit," *The International Standard Bible Encyclopedia,* ed. Geoffrey W. Bromiley (Grand Rapids, Mich.: Wm. B. Eerdmans Publishing Co., 1982), 2:365. [2]Walter Bauer, *A Greek-English Lexicon of the New Testament and Other Early Christian Literature,* 3d ed., rev. and ed. Frederick W. Danker (Chicago: University of Chicago Press, 2000), 54.